ಅಗಲಿದ್ದಾರೆ. ಕೆ.ಎಸ್. ಭಗವಾನ್ ಅವರಿಗೀಗ 85 ವರ್ಷ ವಯಸ್ಸು. 22 ವರ್ಷಗಳ ನಂತರ, ಈ ಇಳಿವಯಸ್ಸಿನಲ್ಲಿಯೂ ಅವರು ನಿರ್ದೇಶನದ ಕ್ಯಾಪ್ ತೊಟ್ಟು ಆ್ಯಕ್ಷನ್ ಕಟ್ ಹೇಳಿದ ಸಿನಿಮಾ 'ಆಡುವ ಗೊಂಬೆ'. ಈ ಚಿತ್ರ ವರ್ಷದ ಮೊದಲ ಶುಕ್ರವಾರ ಅಂದರೆ ಜನವರಿ 4ರಂದು ಬಿಡುಗಡೆಯಾಯಿತು. ವರ್ಷಾರಂಭಕ್ಕೆ ಈ ಚಿತ್ರ ಬಂದಿದ್ದು, ವರ್ಷದ ಸಿನಿತೇರನ್ನು ಎಳೆಯುವ ತರುಣೋತ್ಸಾಹ ಕಾರ್ಯಕ್ರಮವನ್ನು ಹಿರಿಯ ಜೀವವೊಂದು ಉದ್ಘಾಟಿಸಿ ಹಾರೈಸಿದ ಹಾಗಿದೆ.

ಹಾಗೆ ನೋಡಿದರೆ ಜನವರಿ ತಿಂಗಳು ಚಿತ್ರರಂಗದ ಪಾಲಿಗೆ ಅಷ್ಟೇನೂ ಆಶಾದಾಯಕ ಆಗಿರಲಿಲ್ಲ. ಮೊದಲ ವಾರ 'ಆಡುವ ಗೊಂಬೆ' ಜೊತೆಗೇ ಬಿಡುಗಡೆಯಾದ ದಿಗಂತ್ ಮತ್ತು ಸೋನು ಗೌಡ ನಟಿಸಿದ್ದ ಮಂಜುನಾಥ ಜೆ. ಅನಿವಾರ್ಯ ನಿರ್ದೇಶನದ 'ಫಾರ್ಚುನರ್' ಗಮನಿಸಬೇಕಾದ ಸಿನಿಮಾವೇ. ಆಧುನಿಕ ಬದುಕಿನಲ್ಲಿ ಮಾನವೀಯ ಸಂಬಂಧಗಳ ಮಹತ್ವವನ್ನು ಹೇಳಹೊರಡುವ ಈ ಸಿನಿಮಾ ಪಾತ್ರಗಳ ಬ್ಲ್ಯಾಕ್ ಆ್ಯಂಡ್ ವೈಟ್ ಗುಣದಿಂದ ಸೊರಗಿತ್ತು. ಪ್ರೇಕ್ಷಕನೂ ಇದಕ್ಕೆ ವಾವ್ ಎನ್ನಲಿಲ್ಲ.

ಜನವರಿಯಲ್ಲಿ ಬಿಡುಗಡೆಯಾದ 11 ಸಿನಿಮಾಗಳಲ್ಲಿ ಹೆಚ್ಚು ಸುದ್ದಿ ಮಾಡಿದ್ದು ಎ. ಹರ್ಷ ನಿರ್ದೇಶನದ 'ಸೀತಾರಾಮ ಕಲ್ಯಾಣ'. ನಿಖಿಲ್ ಕುಮಾರಸ್ವಾಮಿ ಮತ್ತು ರಚಿತಾ ರಾಮ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ ಈ ಚಿತ್ರ ಬಿಡುಗಡೆಗೂ ಮುನ್ನ ಸುದ್ದಿಮಾಡಿದಷ್ಟು ತೆರೆಯ ಮೇಲೆ ಸದ್ದು ಮಾಡಲಿಲ್ಲ. ಖಾಲಿ ಹೊಡೆಯುವ ಚಿತ್ರಮಂದಿರಗಳೆದುರು ಟಿಕೆಟ್‌ಗಳನ್ನು ಹಂಚಿದರೂ ಜನರು ಕಲ್ಯಾಣಮಂಟಪವನ್ನು ತುಂಬಲಿಲ್ಲ. ಚುನಾವಣೆಯ ಉಪಯೋಗವನ್ನು ಗಮನಲ್ಲಿಟ್ಟುಕೊಂಡೇ ಮಾಡಿದಂತಿದ್ದು ಈ ಸಿನಿಮಾಗಿಂತ, 'ಜಾಗ್ವಾರ್' ಸಿನಿಮಾ ಧ್ವನಿಸಾಂದ್ರಿಕೆ ಬಿಡುಗಡೆ ಸಂದರ್ಭದಲ್ಲಿ ಕುಮಾರಸ್ವಾಮಿ 'ಎಲ್ಲಿದ್ದೀಯಪ್ಪಾ ನಿಖಿಲ್?' ಎಂದು ಕರೆದ ಮೂರೂವರೆ ನಿಮಿಷದ ದೃಶ್ಯತುಣುಕೇ ಹೆಚ್ಚು ಪಾಪ್ಯುಲರ್ ಆಯಿತು.

## ನಟಸಾರ್ವಭೌಮನ ಆರ್ಭಟ

ಫೆಬ್ರುವರಿ ತಿಂಗಳಲ್ಲಿ ಬಿಡುಗಡೆಯಾದ ಸಂಖ್ಯೆ 11ರಿಂದ 16ಕ್ಕೆ ಏರಿತು. ಬರೀ ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ. ಈ ವರ್ಷದ ಮೊದಲರ್ಧದಲ್ಲಿ ಗಮನಸೆಳೆದ ಹಲವು ಸಿನಿಮಾಗಳು ಬಿಡುಗಡೆಯಾಗಿದ್ದು ಫೆಬ್ರುವರಿಯಲ್ಲಿಯೇ. ಹಾಗಾಗಿ ನಿಜವಾದ ಇನಿಂಗ್ಸ್ ಆರಂಭವಾಗಿದ್ದು ಫೆಬ್ರುವರಿಯಲ್ಲಿಯೇ ಎಂದು ಹೇಳಬೇಕು. ಸಿಂಪಲ್ ಸುನಿ ನಿರ್ದೇಶನದ 'ಬಜಾರ್' ಈ ತಿಂಗಳ ಮೊದಲ ದಿನವೇ ಬಿಡುಗಡೆಯಾಯಿತು. ತೆಳು ಹಾಸ್ಯದ, ಸಸ್ಪೆನ್ಸ್ ಎಳೆಯ ಚಿತ್ರಗಳನ್ನೆಲ್ಲ ಮಾಡಿ ಪ್ರೇಕ್ಷಕರನ್ನು ಮೆಚ್ಚಿಸಿದ್ದ ಸುನಿ 'ಬಜಾರ್' ಮೂಲಕ ಆ್ಯಕ್ಷನ್ ಕಥೆಯನ್ನು ಹೇಳಹೊರಟಿದ್ದನ್ನು ಪ್ರೇಕ್ಷಕರು ಅರೆಗಣ್ಣಲ್ಲೇ ನೋಡಿ ಸುಮ್ಮನಾದರು. ಫೆ. 7ಕ್ಕೆ ಬಿಡುಗಡೆಯಾದ 'ನಟಸಾರ್ವಭೌಮ' ಈ ವರ್ಷದ ಮೊದಲ ಸ್ಟಾರ್ ಸಿನಿಮಾ. 2017ರಲ್ಲಿ ತೆರೆಕಂಡು ಸೂಪರ್‌ಹಿಟ್ ಆದ 'ರಾಜಕುಮಾರ' ಸಿನಿಮಾ ನಂತರ ಹತ್ತಿರ ಹತ್ತಿರ ಎರಡು ವರ್ಷ ಗ್ಯಾಪ್ ತೆಗೆದುಕೊಂಡು 'ಆತ್ಮದ ಕನ್ನಡಕ' ತೊಟ್ಟು ಬಂದ ಪುನೀತ್ ಅವರನ್ನು ಅಭಿಮಾನಿಗಳು ಎತ್ತಿ ಮೆರೆಸದಿದ್ದರೂ ಒಂದಿಷ್ಟು ದಿನ ಚಿತ್ರಮಂದಿರಗಳಿಂದ ಕದಲದಂತೆ ನೋಡಿಕೊಂಡರು.

## ಡಿಟೆಕ್ಟಿವ್ ದಿವಾಕರನ ಕಾಮಿಡಿ

ಈ ವರ್ಷದ ಹಿಟ್ ಸಿನಿಮಾಗಳ ಲಿಸ್ಟ್‌ಗೆ ಈಗಾಗಲೇ ಸೇರಿಕೊಂಡಿರುವ 'ಬೆಲ್ ಬಾಟಂ' ಸಿನಿಮಾ ಬಿಡುಗಡೆಯಾಗಿದ್ದು ಫೆ. 15ಕ್ಕೆ. ಜಯತೀರ್ಥ ನಿರ್ದೇಶನದ ಈ ಚಿತ್ರಕ್ಕೆ 'ಬೆಂಕಿಪಟ್ಣ'ದ ಟಿ.ಕೆ. ದಯಾನಂದ ಕಥೆ ಬರೆದಿದ್ದರು. ರಿಷಭ್ ಶೆಟ್ಟಿ ಮತ್ತು ಹರಿಪ್ರಿಯಾ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ 'ಬೆಲ್ ಬಾಟಂ' ಹಳೆಯ ಕಾಲದ ಕಥೆಯನ್ನಿಟ್ಟುಕೊಂಡು ಹೊಸ ಕಾಲದ ಪ್ರೇಕ್ಷಕರಿಗೆ ಮನರಂಜನೆಯ ಕಂಪ್ಲೀಟ್ ಪ್ಯಾಕೇಜ್ ಕೊಟ್ಟು ಗಲ್ಲಾಪೆಟ್ಟಿಗೆಯಲ್ಲಿಯೂ ಝಣಝಣ ಕಾಂಚಾಣ ಎಣಿಸಿದ ಸಿನಿಮಾ ಇದು.

ಎಂಬತ್ತರ ದಶಕದ ಪರಿಸರ, ಅಲ್ಲಿ ಪೊಲೀಸ್ ಠಾಣೆಯಲ್ಲಿಯೇ ನಡೆಯುವ ದರೋಡೆಯ ಪ್ರಕರಣವನ್ನು ಭೇದಿಸಲು ಹೊರಡುವ ಡಿಟೆಕ್ಟಿವ್ ದಿವಾಕರ ಕಾಮಿಡಿ ಮತ್ತು ಪೆಕರುಗುಣದ ಜೊತೆಗೆ ಕಣ್ಣಿಗೆ ದಪ್ಪಗೆ ಕಾಡಿಗೆ ಬಳಿದುಕೊಂಡು ಕಣ್ಣಲ್ಲೇ ಮಾತಾಡುವ ಹಳ್ಳಿ

## ಫುಲ್ ಸೌಂಡು!

ಕನ್ನಡ ಚಿತ್ರಗಳು ಚಂದನವನದ ಆಚೆಗೂ ಸೌಂಡು ಮಾಡುತ್ತಿರುವುದು ಹೊಸ ವಿದ್ಯಮಾನ ಅಲ್ಲ. ಆದರೆ ಆ ಸೌಂಡು ಜಾಸ್ತಿಯಾಗಿರುವುದಂತೂ ನಿಜ. ಸುದೀಪ್ ನಾಯಕನಾಗಿ ನಟಿಸಿರುವ 'ಪೈಲ್ವಾನ' ಒಟ್ಟು ಎಂಟು ಭಾಷೆಗಳಲ್ಲಿ ನಿರ್ಮಾಣವಾಗುತ್ತಿದ್ದು, ಕನ್ನಡ ಬಿಟ್ಟು ಏಳು ಭಾಷೆಗಳಲ್ಲಿ ಕನ್ನಡದ ಕಹಳೆ ಮೊಳಗಿಸಲು ಸಜ್ಜಾಗಿದೆ. ರಕ್ಷಿತ್ ಶೆಟ್ಟಿ ಅವರ 'ಅವನೇ ಶ್ರೀಮನ್ನಾರಾಯಣ' ಕೂಡ ಐದು ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಸಂಗತಿಯನ್ನು ನಿರ್ಮಾಪಕ ಪುಷ್ಕರ್ ಮಲ್ಲಿಕಾರ್ಜುನಯ್ಯ ಇತ್ತೀಚೆಗಷ್ಟೆ ಬಹಿರಂಗಪಡಿಸಿದ್ದಾರೆ.

ಕನ್ನಡದ ಸಿನಿಮಾಗಳ ಡಬ್ಬಿಂಗ್ ಹಕ್ಕುಗಳಿಗೂ ಹಿಂದೆಂದಿಗಿಂತಲೂ ಬೇಡಿಕೆ ಬಂದಿದೆ. ನೂರು ದಿನ ಮುಗಿಸಿರುವ ಬೆಲ್ ಬಾಟಂ ಸಿನಿಮಾ ತೆಲುಗು ಮತ್ತು ಹಿಂದಿಯಲ್ಲಿ ಅವತಾರವೆತ್ತಲು ಸಜ್ಜಾಗಿವೆ. ಕನ್ನಡದ ಹಲವು ಆ್ಯಕ್ಷನ್ ಸಿನಿಮಾಗಳನ್ನು ಹಿಂದಿ ಸೇರಿದಂತೆ ಬೇರೆ ಬೇರೆ ಭಾಷೆಗಳಲ್ಲಿ ಡಬ್ಬಿಂಗ್ ಹಕ್ಕು ಪಡೆದುಕೊಳ್ಳಲು ಹಲವರು ಮುಂದೆ ಬರುತ್ತಿದ್ದಾರೆ.



'ಯಜಮಾನ' ಸಿನಿಮಾದಲ್ಲಿ ದರ್ಶನ್, ರಶ್ಮಿಕಾ ಮಂದಣ್ಣ